


# ಮನಸು ಅರಳುವಂತಿರಲಿ ಮಾತು

ಮಾಧ್ಯಮಗಳು, ಸಾಮಾಜಿಕ ಮಾಧ್ಯಮಗಳ ತುಂಬೆಲ್ಲ ಮನಸ್ಸು ಒಡೆಯುವ ಮಾತುಗಳು. ಈ ಒಡಕಿನಿಂದ ಮಕ್ಕಳನ್ನು ದೂರವಿಡುವುದು ಹೇಗೆ?

■ ಸ್ವಯಂಪ್ರಭಾ

ಅಂಗೈಯಲ್ಲಿರುವ ಮೊಬೈಲ್ ಸ್ಕ್ರೀನ್ ತೆರೆಯುವ ಮುನ್ನವೇ ಇನ್‌ಸ್ಟಾಗ್ರಾಂ, ಫೇಸ್‌ಬುಕ್, ಇಮೇಲ್, ಸ್ನಾಪ್ ಚಾಟ್, ವಿಚಾಟ್ ಎಲ್ಲದರಲ್ಲಿಯೂ ವಿಡಿಯೊಗಳು, ಫೋಟೋಗಳು, ಸುದ್ದಿಯ ಲಿಂಕ್‌ಗಳು ಬಂದಿರುವ ಕುರಿತು ರಾಶಿ ರಾಶಿ ನೋಟಿಫಿಕೇಶನ್‌ಗಳು. ಬೇಡವೆಂದರೂ ಅವೇ ಚಿತ್ರಗಳು ಪದೇ ಪದೇ ಗೋಚರಿಸುತ್ತಿವೆ.

ಸಾಲು ನಿಂತ ಅಮೆರಿಕನ್ ಸೈನಿಕರ ನಡುವೆ ನಡೆದು ಹೋಗುತ್ತಿರುವ ಇಬ್ಬರು ಪುಟಾಣಿ ಕಂದಮ್ಮಗಳು! ಅವರು ಅಕ್ಕತಂಗಿಯಿರಬಹುದೇ? ದೊಡ್ಡವಳ ಮನದಲ್ಲಿ ಭಯವೆಷ್ಟು ಹೆಪ್ಪುಗಟ್ಟಿ ಗಾಯ ಮಾಡುತ್ತಿದೆಯೋ? ಅಕ್ಕನಿದ್ದಾಳೆ ಎಂಬ ಕಿಂಚಿತ್ ನೆಮ್ಮದಿ ಚಿಕ್ಕವಳ ಎದೆಯಲ್ಲಿ ಇರಬಹುದೇ? ಅಥವಾ ಅದ್ಯಾವುದಕ್ಕೂ ಜಾಗವಿಲ್ಲದೆ ಒಮ್ಮೆ ಇಲ್ಲಿಂದ ಹೋದರೆ ಸಾಕು ಎಂಬ ಭಾವ ಅವರ ಮನದಲ್ಲಿ ತುಂಬಿದೆಯೇ? ಮತ್ತೆನೋಡಿದರೆ ವಿಮಾನಕ್ಕೆ ಅಂಟಿಕೊಂಡ ಜನರು, ಚಕ್ರದ ಮೇಲೆ ಜನರು, ಬಸ್ಸಿನ ಹಿಂದೆ ಓಡಿದಂತೆಯೇ ವಿಮಾನದ ಹಿಂದೆ ಓಡುತ್ತಿರುವ ಜನರು ಗನ್ನುಗಳು, ಕಪ್ಪುಬಟ್ಟೆಯಲ್ಲಿ ಮುಖಮುಚ್ಚಿಕೊಂಡು ಗನ್ ಹಿಡಿದು ನಿಂತ ಬೆಳ್ಳನೆಯ ಗಂಡಸರು!. ಮನೆಯಲ್ಲಿ ಆನ್‌ಲೈನ್ ಪಾಠ ಕೇಳುವುದನ್ನು ಬಿಟ್ಟು, ಮಕ್ಕಳು ಮೊಬೈಲ್‌ನೊಳಗೆ ಬಿಡುಗಣ್ಣೆರಿಸಿ ಇವನ್ನೆಲ್ಲ ನೋಡುತ್ತಿದ್ದಾರೆ.

ಆನ್‌ಲೈನ್ ಕ್ಲಾಸ್‌ಗೆಂದು ಮೊಬೈಲ್ ಹಿಡಿದು ಕುಳಿತ ಶ್ವೇತಾ ಪುಟ್ಟಿಯೂ ಕ್ಲಾಸ್ ಅನ್ನು ಅರ್ಧಕ್ಕೇ ಬಿಟ್ಟು ಬಂದು ಪದೇ ಪದೇ ಅಮ್ಮನ ಬಳಿ ಪ್ರಶ್ನೆಗಳನ್ನು ಕೇಳುತ್ತಿದ್ದಾಳೆ. 'ಅಮ್ಮಾ ಅವರು ಯಾವ ಆಫೀಸಿಗೂ ಹೋಗಿ ಕೆಲಸ ಮಾಡುವುದಿಲ್ಲವಾ? ಅವರ ಅಮ್ಮ ಎಲ್ಲಿರುತ್ತಾರೆ? ಅವರ ಮಕ್ಕಳನ್ನು ಶಾಲೆಗೆ ಕರೆದೊಯ್ಯಲು ವ್ಯಾನ್ ಇರುವುದಿಲ್ಲವಾ? ಒಂದು ಸರ್ಕಾರ ಹೋಗಿ ಮತ್ತೊಂದು ಸರ್ಕಾರ ಬಂದರೆ ಹೀಗೇಕೆ ಜನರ ಕೊಲೆಯಾಗುತ್ತಿದೆ?'

ಶ್ವೇತಾ ಬಹಳ ಚಿಕ್ಕವಳೇನೂ ಅಲ್ಲ. ಏಳನೇ ತರಗತಿಯಲ್ಲಿ ಓದುತ್ತಿದ್ದಾಳೆ. ಮಗಳ ಪ್ರಶ್ನೆಗಳಿಗೆ ಉತ್ತರಿಸುವುದಕ್ಕೆ ತಾನು ಬಳಸುವ ಪದಗಳೇ ಶ್ವೇತಾಳ ಅಮ್ಮನಿಗೆ ಹಿಂಸೆ ನೀಡಲು ಶುರು ಮಾಡಿದವು. ಯಾಕೆಂದರೆ, ಪ್ರತೀ ಉತ್ತರವೂ ಮತ್ತೊಂದು ಪ್ರಶ್ನೆಗೆ ಅವಕಾಶ ಮಾಡಿಕೊಡುತ್ತಿತ್ತು. ಬಹಳ ಕೆಟ್ಟ ಕಾಲವಿದು.

ನಮ್ಮ ಸಮಾಜದಲ್ಲಿ, ನಮಗೆ ಸಮ್ಮತವಾಗದ ಸಂದರ್ಭಗಳು ಎದುರಾಗಲೆಲ್ಲ, 'ಇದು ಕೆಟ್ಟಕಾಲವೆಂದೋದೇಶದಸ್ಥಿತಿಹದಗೆಟ್ಟಿದೆಯೆಂದೋ ಬಹಳ ಕಠಿಣ ಪದಗಳನ್ನು ಬಳಸಿ ಟೀಕಿಸುತ್ತಿದ್ದೆವು. ಆದರೆ ಈಗ ನಾವು ಬಳಸಿದ ತೀವ್ರ ಕಠಿಣ ಪದಗಳೆಲ್ಲ ದೂರದಲ್ಲೆಲ್ಲೋ ಸಾಕಾರಗೊಂಡು ಚಿತ್ರಗಳಾಗಿ, ವಿಡಿಯೊಗಳಾಗಿ ನಮ್ಮ ಬಳಿಗೇ ಹರಿದು ಬರುತ್ತಿವೆ. ಅಲ್ಲಿ ಅಳುವ ಕಂದಮ್ಮಗಳ ಧ್ವನಿ ಇಲ್ಲಿಯವರೆಗೂ ಕೇಳುತ್ತಿದೆ. ನಮ್ಮದೇ ಮಕ್ಕಳ ಅಂಗೈಯಲ್ಲಿ ಅವರ ಸಮಯವಯಸ್ಸಿನ ಮಕ್ಕಳ, ಅಮ್ಮನಂತೆ ಇರುವ ಹೆಂಗಸರ ನೋವಿನ ಧ್ವನಿಗಳು ಕೇಳುತ್ತಿವೆ. ಶ್ವೇತಾಳ ಅಮ್ಮ ತನ್ನ ಮೊಬೈಲ್‌ನಿಂದ ಫೇಸ್‌ಬುಕ್, ಇನ್‌ಸ್ಟಾಗ್ರಾಂ ಮತ್ತಿತರ ಸಾಮಾಜಿಕ ಮಾಧ್ಯಮಗಳನ್ನೆಲ್ಲ ಅನ್‌ಇನ್‌ಸ್ಟಾಲ್ ಮಾಡಿ ನಂತರ ಮೊಬೈಲನ್ನು ಮಗಳ ಕೈಗಿಟ್ಟಳು.

ಈ ದುರಿತ ಕಾಲದಲ್ಲಿ, ಮಕ್ಕಳು ತಮ್ಮ ಸ್ನೇಹಿತರ ನಡುವೆ ಪರಸ್ಪರರ ನಡುವೆ ಒಡಕು ಭಾವ ಮೂಡಿಸದಂತೆ ಒಳ್ಳೆಯ ಮಾತುಗಳನ್ನು ಮಕ್ಕಳಿಗೆ ಹಿರಿಯರು ಹೇಳಬೇಕು. ಸಕಾರಾತ್ಮಕ ವಿಚಾರಗಳನ್ನು ಮಕ್ಕಳ ಮುಂದೆ ಇರಿಸುವ ಅತ್ಯಂತ ತುರ್ತು ನಮ್ಮ ಮುಂದಿದೆ.

ಭೀಕರತೆಯನ್ನೇ ಯಶಸ್ಸಿನ ಮಾದರಿಯೇನೋ ಎಂಬಂತೆ ಎತ್ತರದ ಧ್ವನಿಯೊಂದಿಗೆ ಸುದ್ದಿ ಪ್ರಸಾರ ಮಾಡುತ್ತಿರುವ ಮಾಧ್ಯಮಗಳಿಂದ ಮಕ್ಕಳನ್ನು ತುಸು ಅಂತರದಲ್ಲಿಯೇ ಇರಿಸುವುದು ಉತ್ತಮ. ಇಂದು ಮಕ್ಕಳ ಮನಸ್ಸಿನಲ್ಲಿ ಮೊಳಕೆಯೊಡೆಯುವ ಭಾವನೆಗಳು ನಾಳೆಯ ದಿನಗಳಲ್ಲಿ ಬಲಿಯುತ್ತವೆ. ಅವುಗಳ ಆಧಾರದಲ್ಲಿಯೇ ಸಾಮಾಜಿಕ ವ್ಯವಸ್ಥೆಗಳು ಮಾರ್ಪಾಡು ಕಾಣುತ್ತವೆ. ಆದ್ದರಿಂದ ಮಕ್ಕಳಿಗೆ ಸಕಾರಾತ್ಮಕ ವಿಚಾರಗಳ ಕುರಿತು ಹೆಚ್ಚೆಚ್ಚು ತಿಳಿಹೇಳಬೇಕಾದ ಅವಶ್ಯಕತೆ ಇದೆ.

ಈ ಪ್ರಕ್ರಿಯೆಯು ಮನೆಗಳಲ್ಲಿ ಮಾತ್ರವಲ್ಲ, ಶಾಲೆಗಳಲ್ಲಿಯೂ ನಡೆಯಬೇಕಾಗಿದೆ. ಆನ್‌ಲೈನ್ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣದ ವ್ಯಾಖ್ಯೆಯೇ ಬದಲಾಗಿದೆ. ಪುಸ್ತಕದಲ್ಲಿರುವ ಪಾಠಗಳೂ ಅವುಗಳ ಕೊನೆಯಲ್ಲಿರುವ ಪ್ರಶ್ನೆಗಳಿಗೆ ಉತ್ತರಗಳನ್ನು ಬರೆಯುವ ಕೌಶಲವಷ್ಟೇ ಶಿಕ್ಷಣ ಎಂಬಂತಾಗಿದೆ. ಆದರೆ ಬಿಕ್ಕಟ್ಟಿನ ಈ ಪರಿಸ್ಥಿತಿಯಲ್ಲಿ ಶಾಲೆ ಮತ್ತು ಕಾಲೇಜುಗಳಲ್ಲಿ ಸೌಹಾರ್ದತೆಯ ಪಾಠಗಳ ಅಗತ್ಯ ತುಂಬಾ ಇದೆ. ಸಾಮಾಜಿಕ ಜಾಲತಾಣಗಳಲ್ಲಿ, ಪರಸ್ಪರರ ನಡುವಿನ ಹಾರ್ದಿಕ ಚರ್ಚೆಗಳಲ್ಲಿ ದ್ವೇಷದ ಮಾತುಗಳೇ ತುಂಬಿರುವಾಗ, ಸಹೃದಯರು ಪ್ರಯತ್ನಪೂರ್ವಕವಾಗಿ ಅಂತಹ ಕಹಿಯನ್ನು ಮಾಸುವಂತಹ ಕೆಲಸಗಳನ್ನು ಮಾಡಬೇಕಾಗಿದೆ. ಚರ್ಚೆಗಳ ದಿಕ್ಕನ್ನು ಬದಲಾಯಿಸಬೇಕಾಗಿದೆ.

ವೆಬಿನಾರ್‌ಗಳು, ಫೇಸ್‌ಬುಕ್ ಲೈವ್ ಕಾರ್ಯಕ್ರಮಗಳಲ್ಲಿಯೂ ಮಕ್ಕಳು ಮತ್ತು ಯುವಜನರ ಆಲೋಚನೆಯ ದಿಕ್ಕನ್ನು ಒಳಿತಿನೆಡೆಗೆ ಬದಲಿಸುವಂತಹ ಮಾತುಗಳು ಕೇಳಿ ಬಂದರೆ ಚೆನ್ನ.

ಮನೆಯ ಹೊರಗಿನ ಮಾತುಗಳು ಹಾಗಿರಲಿ, ಮನೆಯೊಳಗೆ ಅಪ್ಪ ಅಮ್ಮ ಏನು ಮಾತನಾಡುತ್ತಾರೆ ಎಂಬುದನ್ನೂ ಮಕ್ಕಳು ಸೂಕ್ಷ್ಮವಾಗಿ ಗಮನಿಸುತ್ತಾರೆ. ಈ ಅರಿವಿನೊಂದಿಗೆ, ಪೋಷಕರು ತಮ್ಮೊಳಗೆ ನಡೆಸುವ ಚರ್ಚೆಗಳ ಸಂದರ್ಭದಲ್ಲಿ ಎಚ್ಚರಿಕೆ ಪದಗಳನ್ನು ಬಳಸಬೇಕು.

ಪ್ರತಿಕ್ರಿಯಿಸಿ: feedback@sudha.co.in